ಪರಿಶಿಷ್ಟ ಜಾತಿಯವರಿಗೆ ಮಾಂಗಲ್ಯ ಭಾಗ್ಯ ಯೋಜನೆ

399(457) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ಅಣ್ಣಯ್ಯ)(ತುರುವೇಕೆರೆ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಪರಿಶಿಷ್ಟ ಜಾತಿ/ಪರಿಶಿಷ್ಟ ಜನಾಂಗಕ್ಕೆ ಮಾಂಗಲ್ಯ ಭಾಗ್ಯ ಯೋಜನೆಯನ್ನು ಜಾರಿಗೆ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಸರ್ಕಾರ ಈ ಜನಾಂಗವನ್ನು ಮೇಲಕ್ಕೆತ್ತುವ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರೂ ಆ ಜನಾಂಗಕ್ಕೆ ತಲುಪದಿರಲು ಕಾರಣವೇನು?

ಇ. ಪ್ರಸ್ತುತ ವರ್ಷದಲ್ಲಿ ಮೇಲಿನ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

(ಅ) ಯಿಂದ (ಇ)

ಪ್ರಸಕ್ತ ವರ್ಷದಲ್ಲಿ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಜನಾಂಗದವರಿಗೆ ಮಾಂಗಲ್ಯ ಭಾಗ್ಯ ಯೋಜನೆಯನ್ನು ಅನುಷ್ಠಾನಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಈ ಜನಾಂಗದವರ ಕಲ್ಯಾಣಕ್ಕಾಗಿ ಸರ್ಕಾರವು ಹಾಕಿಕೊಂಡಿರುವ ಇನ್ನಿತರ ಅನೇಕ ಕಾರ್ಯ ಕ್ರಮಗಳ ಪ್ರಯೋಜನವನ್ನು ಅವರು ಪಡೆಯುತ್ತಿದ್ದಾರೆ.

ತುರುವೇಕೆರೆ ನಗರದ ಗ್ರಾಮೋದ್ಯೋಗ ತರಬೇತಿ ಕೇಂದ್ರ ಅಭಿವೃದ್ಧಿ

400(458) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ಅಣ್ಣಯ್ಯ)(ತುರುವೇಕೆರೆ) : ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ತುರುವೇಕೆರೆ ನಗರದ ಗ್ರಾಮೋದ್ಯೋಗ ತರಬೇತಿ ಕೇಂದ್ರ ಯಾವಾಗ ಪ್ರಾರಂಭವಾಯಿತು; ಈವರೆಗೆ ಈ ಕೇಂದ್ರವು ಕಾರ್ಯನಿರ್ವಹಿಸದಿರಲು ಕಾರಣವೇನು;

ಆ. ಕಳೆದ ಮೂರು ವರ್ಷದಿಂದ ಇದರ ಸಾಧನೆ ಏನು;

ಇ. ಇದನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು;

ಈ. ಈ ವರ್ಷದ ಆಯವ್ಯಯದಲ್ಲಿ ಈ ಕೇಂದ್ರಕ್ಕೆ ಹೆಚ್ಚು ಹಣ ಬಿಡುಗಡೆ ಮಾಡಿ ಅನುಕೂಲ ಮಾಡಿಕೊಡಲಾಗುವುದೇ?

ಶ್ರೀ ಆರ್. ರೋಷನ್ ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು)

ಅ. ತುರುವೇಕೆರೆ ನಗರದಲ್ಲಿ ಗ್ರಾಮೋದ್ಯೋಗ ತರಬೇತಿ ಕೇಂದ್ರವನ್ನು ಪ್ರಾರಂಭಿಸಿರುವುದಿಲ್ಲ.

ಉದ್ಭವಿಸುವುದಿಲ್ಲ

ಆ. ಉದ್ಭವಿಸುವುದಿಲ್ಲ

ಇ. ಉದ್ಭವಿಸುವುದಿಲ್ಲ

ಈ. ಉದ್ಭವಿಸುವುದಿಲ್ಲ